ಶ್ರೀರಾಮಕೃಷ್ಣ ವಿದ್ಯಾಕೇಂದ್ರ–ಶಿವನಹಳ್ಳಿ

ಹೆಸರು: ವಿಷಯ: ಗಣಿತ (ಭಿನ್ನರಾಶಗಳು)


ತರಗತಿ: 7th topic 12

---

ಕೆಳಗಿನ ಸನ್ನಿವೇಶಗಳನ್ನು ಗಮನಿಸಿ.

1) ರಮೇಶನು ತನ್ನ ಮಗ ಮಿಥುನ್ ಗೆ 4 ಸೇಬಿನ ಹಣ್ಣುಗಳನ್ನು ಕೊಟ್ಟು ಎಲ್ಲರು ಹಂಚಿಕೊಳ್ಳಲು ಹೇಳುತ್ತಾನೆ. ಮಿಥನ್ ತಮ್ಮ ಗಗನ್ ಅರ್ಧದಷ್ಟು ಕೊಡುವಂತೆ ಕೇಳುತ್ತಾನೆ, ಗಗನ್ ಸ್ನೇಹಿತ ರೋಹಿತ್ ಅದರಲ್ಲಿ ಅರ್ಧದಷ್ಟು ಕೇಳುತ್ತಾನೆ, ರೋಹಿತ್ ತಂಗಿ ಮೀನಾ ಅದರಲ್ಲಿ ಅರ್ಧ ಕೇಳುತ್ತಾಳೆ. ಮೀನಾನ ಸ್ನೇಹಿತೆ ಕಲಾ ಅದರಲ್ಲಿ ಅರ್ಧ ಕೇಳುತ್ತಾಳೆ.

ಈ ವಿವರವನ್ನು ಕೆಳಗೆ ಚಿತ್ರ ಬಿಡಿಸಿ ವಿವರಿಸಿ.



2) ಸುರೇಶನು ಮನೆಗೆ ದಿನನಿತ್ಯಕ್ಕೆ ಅವಶ್ಯವಿರುವ ಸಾಮಾನು ತರಲು ಅಂಗಡಿಗೆ ಹೋಗುತ್ತಾನೆ ಅಲ್ಲಿ ಅರ್ಧ ಕೆಜಿ ಹೆಸರುಕಾಳು, ಮುಕ್ಕಾಲು ಕೆಜಿ ಸಕ್ಕರೆ, ಕಾಲು ಕೆಜಿ ಟೀ ಪುಡಿಗಳನ್ನು ತೆಗೆದುಕೊಳ್ಳುತ್ತಾನೆ.

1. ಕಾಲು, ಅರ್ಧ, ಮುಕ್ಕಾಲು ಇದೆಲ್ಲಾ ನಿತ್ಯ ಜೀವನದಲ್ಲಿ ನಾವು ಬಳಸುವ ಪದಗಳು, ಇದನ್ನೆಲ್ಲಾ ಸಂಖ್ಯೆಯಲ್ಲಿ ಹೇಗೆ ಪ್ರತಿನಿಧಿಸಬಹುದು? ಪ್ರಯತ್ನಿಸಿ

ಅರ್ಧ ___________


ಕಾಲು ___________

ಮುಕ್ಕಾಲು _________

ಒಂದೂವರೆ __________

- ಇದೇ ತರಹ **ಕಾಲು, ಅರ್ಧ, ಮುಕ್ಕಾಲು** ಇತ್ಯಾದಿ ಪದಗಳನ್ನು ನಿತ್ಯ ಜೀವನದಲ್ಲಿ ಬಳಸುವ ಎರಡು ಸನ್ನಿವೇಶಗಳನ್ನು ಬರೆಯಿರಿ.

**ಭಿನ್ನರಾಶಿ ರೂಪದಲ್ಲಿ ಬರೆಯುವುದು**



- ಈ ವೃತ್ತವನ್ನು ಎಷ್ಟು **ಸಮಾನ ಭಾಗ**ಗಳಾಗಿ ಮಾಡಲಾಗಿದೆ?











______________

- ಎಷ್ಟು **ಭಾಗಗಳಿಗೆ ಬಣ್ಣ ಹಚ್ಚ**ಲಾಗಿದೆ?


______________


ಭಿನ್ನರಾಶಿ ರೂಪ, $\frac{\text{ಬಣ್ಣ ಹಚ್ಚಿರುವ ಭಾಗದ ಸಂಖ್ಯೆ}}{\text{ಸಮ ಭಾಗಗಳಾಗಿ ಮಾಡಿರುವ ಸಂಖ್ಯೆ}} = \frac{\square}{\square}$


ಕೆಳಗಿನ ಚಿತ್ರದಲ್ಲಿ ಬಣ್ಣ ಹಚ್ಚಿರುವ ಭಾಗವನ್ನು ಭಿನ್ನರಾಶಿ ರೂಪದಲ್ಲಿ ಬರೆಯಿರಿ


| | | | | | |
|---|---|---|---|---|---|
| 1 |  | | 2 |  | |
| 3 |  | | 4 |  | |
| 5 |  | | 6 |  | |
| 7 |  | | 8 |  | |
| 9 |  | | 10 |  | |


## ಈ ಭಿನ್ನರಾಶಿ ಸಂಖ್ಯೆಗಳಿಗೆ ಸರಿ ಹೊಂದುವಂತೆ ಬಣ್ಣ ಹಚ್ಚಿ


1. $\frac{3}{5}$ = 


2. $\frac{4}{6}$ = 


3. $\frac{4}{8}$ = 


4. $\frac{2}{5}$ = 


5. $\frac{5}{5}$ = 

6. $\frac{4}{9}$ = 

7. $\frac{5}{8}$ = 

8. $\frac{7}{12}$ = 

9. $\frac{5}{6}$ = 

10. $\frac{6}{9}$ = 

**<u>ಕೆಳಗಿನ ಭಿನ್ನರಾಶಿಗಳನ್ನು ಚಿತ್ರದ ರೂಪದಲ್ಲಿ ಬರೆಯಿರಿ.</u>**

1) 6/8

2) 3/9


3) 3/12

**ಯೋಚಿಸಿ:**


**ಭಿನ್ನರಾಶಿಗಳನ್ನು ಗುಂಪುಗಳಾಗಿ ಮಾಡಬಹುದಾ?**

ಕಾಗದದ ದೋಣಿ ತಯಾರಿಸಿ ಜೊತೆ ಜೊತೆಗೆ ಪ್ರಶ್ನೆಗಳಿಗೆ ಉತ್ತರಿಸಿ. ನೀವು ತಯಾರಿಸಿದ ದೋಣಿಯ ಹಾಳೆಯನ್ನು ಅಂಟಿಸಿ. ಪ್ರತಿ ಭಾಗವನ್ನು ಭಿನ್ನರಾಶಿ ರೂಪದಲ್ಲಿ ಗುರುತಿಸಿ.


ಹಂತ1. ವರ್ಗಕಾರದ ಕಾಗದವನ್ನು ತೆಗೆದುಕೊಳ್ಳಿ.





ಹಂತ 2: ಕಾಗದವನ್ನು ಅರ್ಧ ಭಾಗಕ್ಕೆ ಮಡಚಿ




ಹಂತ 3: ಕಾಗದವನ್ನು ಮತ್ತೆ ಅರ್ಧಕ್ಕೆ ಮಡಚಿ




ಹಂತ 4: ಕಾಗದವನ್ನು ದೋಣಿ ಮಾಡಲು ಬೇಕಾದ ರೀತಿಯಲ್ಲಿ ಮಡಚಿ.




ಹಂತ 5: ಮಡಚಿದ ಎಲ್ಲಾ ಮಡಿಕೆಗಳನ್ನು ಹೊರ ತೆಗೆದು ಪ್ರತಿಯೊಂದು ಭಾಗವನ್ನು ಗುರುತಿಸಿ.

